ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ. ನ್ಯಾಯಾಲಯ ,
ಚಿಕ್ಕಮಗಳೂರು.

ದಿನಾಂಕಃ

**<u>ಸಿ.ಸಿ.ನಂ.1179/ 2025</u>**

<u>ಪಿರ್ಯಾದುದಾರರುಃ</u> ರಾಜ್ಯ ಸರ್ಕಾರದ ಪರವಾಗಿ ನಗರ ಠಾಣಾ ಪೊಲೀಸರು,
ಚಿಕ್ಕಮಗಳೂರು.

**-ವಿರುದ್ಧ-**

<u>ಆರೋಪಿತರುಃ</u>

1. ಡಿ.ಟಿ. ದರ್ಶನ್
ಬಿನ್ ತಿಪ್ಪೇಸ್ವಾಮಿ,
ವಯಸ್ಸು ಸುಮಾರು 24 ವರ್ಷ,
ವಾಸಃ ಸರ್ಕಾರಿ ಶಾಲೆ ಹಿಂಭಾಗ,
ದಂಟರಮಕ್ಕಿ, ಚಿಕ್ಕಮಗಳೂರು.
2. ತೇಜು ಡಿ.ಎಸ್,
ಬಿನ್ ಸೋಮೇಗೌಡ,
ವಯಸ್ಸು ಸುಮಾರು 27 ವರ್ಷ,
ವಾಸಃ ಸರ್ಕಾರಿ ಶಾಲೆ ಹಿಂಭಾಗ,
ದಂಟರಮಕ್ಕಿ, ಚಿಕ್ಕಮಗಳೂರು.
3. ಮಂಜುನಾಥ,
ಬಿನ್ ದೊಡ್ಡೇಗೌಡ,
ವಯಸ್ಸು ಸುಮಾರು 24 ವರ್ಷ,
ವಾಸಃ ದಂಟರಮಕ್ಕಿ, ಜ್ಯೋತಿನಗರ,
ಚಿಕ್ಕಮಗಳೂರು.

<u>ದೋಷಾರೋಪಣೆ</u>

ಚಿಕ್ಕಮಗಳೂರಿನ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಮುಖ್ಯ ನ್ಯಾಯಿಕ ದಂಡಾಧಿಕಾರಿಯಾದ ಶ್ರೀಮತಿ ಕುಮಾರಿ ಸುಜಾತ ಬಿ.ಕಾಂ., ಎಲ್ಎಲ್.ಬಿ, ಆದ ನಾನು ಮೇಲೆ ನಮೂದು ಮಾಡಿರುವ ಆರೋಪಿತರಾದ ನಿಮ್ಮ ವಿರುದ್ಧ ಹೊರಿಸುವ ದೋಷರೋಪಣೆ ಏನೆಂದರೆಃ

ದಿನಾಂಕಃ 05-06-2024 ರಂದು ರಾತ್ರಿ ಸುಮಾರು 09-15 ಗಂಟೆ ಸಮಯದಲ್ಲಿ ಚಿಕ್ಕಮಗಳೂರು ನಗರ ಪೋಲೀಸ್ ಠಾಣಾ ವ್ಯಾಪ್ತಿಯ ಜಿಲ್ಲಾ ಸ್ಟೇಡಿಯಂ ಬಳಿ ಇರುವ ಸ್ವರ್ಣ ಗೌರಿ ಬಾರ್ ಗೆ ಚಾಸಾ-1 -ನವೀನ್ ಕುಮಾರ್ ಬಿ.ಆರ್. ರವರು ತನ್ನ ತಂದೆಗೆ ಕುಡಿಯಲು ಮಧ್ಯವನ್ನು ತೆಗೆದುಕೊಳ್ಳಲು ಹೋಗಿ ಕೌಂಟರ್ ನಲ್ಲಿ ಎರಡು ಕ್ವಾಟರ್ ಒರಿಜಿನಲ್ ಚಾಯ್ಸ್ ವಿಸ್ಕಿಯನ್ನು ತೆಗೆದುಕೊಂಡು ಹೋಗುವ ಸಮಯದಲ್ಲಿ ಕೌಂಟರ್ ಪಕ್ಕದಲ್ಲೇ ಮಧ್ಯವನ್ನು ಕುಡಿಯುತ್ತಿದ್ದ ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಚಾಸಾ-1 ರವರ ಮೈ ಮೇಲೆ ಬಿದ್ದದ್ದಕ್ಕೆ ಚಾಸಾ-1 ರವರು ಯಾಕೆ ಈ ರೀತಿ ಮೇಲೆ ಬೀಳುತ್ತೀರಿ ಎಂದು ಕೇಳಿದ್ದಕ್ಕೆ ಆರೋಪಿತರು ಸೂಳೇಮಗನೇ, ಬೋಳಿಮಗನೇ ಎಂದು ಅವಾಚ್ಯವಾಗಿ ಬೈದು ಅವಮಾನ ಮಾಡಿದ್ದು, ಆ ಕಾರಣ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.504 ರ ಸಹಕಲಂ 34 ರ ಪ್ರಕಾರ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದೂಃ

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಮುಂದುವರೆದು, 1 ನೇ ಆರೋಪಿಯಾದ ನೀವು ನಿಮ್ಮ ಕೈಯಲ್ಲಿ ಹಿಡಿದಿದ್ದ ಬಿಯರ್ ಬಾಟಲಿಯಿಂದ ಚಾಸಾ-1 ರವರ ತಲೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ಆ ಕಾರಣ ಆರೋಪಿಯಾದ ನೀವು ಭಾ.ದಂ.ಸಂ.ಕಲಂ.324 ರ ಸಹಕಲಂ 34 ರ ಪ್ರಕಾರ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದೂಃ

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಮುಂದುವರೆದು, 2 ಮತ್ತು 3 ನೇ ಆರೋಪಿತರಾದ ನೀವು ಬಿಯರ್ ಬಾಟಲಿಯಿಂದ ಚಾಸಾ-1 ರವರ ತಲೆಗೆ ಮತ್ತು ಮುಖಕ್ಕೆ ಹೊಡೆದು ಮೂಗಿಗೆ ತೀವ್ರ ಸ್ವರೂಪದ ರಕ್ತಗಾಯಪಡಿಸಿದ್ದು, ಆ ಕಾರಣ ಆರೋಪಿಯಾದ ನೀವು ಭಾ.ದಂ.ಸಂ.ಕಲಂ.326 ರ ಸಹಕಲಂ 34 ರ ಪ್ರಕಾರ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದೂಃ

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಮುಂದುವರೆದು, ಆರೋಪಿತರಾದ ನೀವು ಚಾಸಾ-1 ರವರನ್ನು ಬಾರ್ ನ ಮುಂಭಾಗ ಎಳೆದುಕೊಂಡು ಬಂದು ಕೆಡವಿ ಕಾಲಿನಿಂದ ತುಳಿದು ಆ ಕಾರಣ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.323 ರ ಸಹಕಲಂ 34 ರ ಪ್ರಕಾರ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದೂಃ

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ ಮುಂದುವರೆದು, ಚಾಸಾ-1 ರವರನ್ನು ಉದ್ದೇಶಿಸಿ ನಮ್ಮನ್ನೇ ಪ್ರಶ್ನೆ ಮಾಡುತ್ತಿಯಾ ನಿನ್ನನ್ನು ಸಾಯಿಸುತ್ತೇನೆ ಎಂದು ಕೊಲೆ ಬೆದರಿಕೆ ಹಾಕಿದ್ದು, ಆ ಕಾರಣ ಆರೋಪಿತರಾದ ನೀವು ಭಾ.ದಂ.ಸಂ.ಕಲಂ.506 ರ ಸಹಕಲಂ 34 ಪ್ರಕಾರ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಎಂದು ನಿಮ್ಮ ವಿರುದ್ಧ ಈ ಆರೋಪಣೆ ಹೊರಿಸಲಾಗಿದೆ.

ಮೇಲಿನ ದೋಷಾರೋಪಣೆ ಬಗ್ಗೆ ಅಧಿವಿಚಾರಣೆ ಈ ನ್ಯಾಯಾಲಯದಿಂದ ನಡೆಸಲ್ಪಡುತ್ತದೆ ಎಂದು ಈ ಮೂಲಕ ನಿರ್ದೇಶನ ನೀಡಲಾಗಿದೆ.

**Sd/-**
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಸಿ.ಜೆ.ಎಂ., ಚಿಕ್ಕಮಗಳೂರು.